ಗುಣಾತ್ಮಕ ಶಿಕ್ಷಣಕ್ಕಾಗಿ ಕ್ರಿಯಾಶೀಲ ಆಡಳಿತ

# ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಾರ್ಯಾಲಯ ಧಾರವಾಡ

ಸಂಖ್ಯೆ. ಸಿ10/ಪ್ರೌಶಾಆ/ಜೇಷ್ಠತಾಪಟ್ಟಿ/60/2014–15 ದಿನಾಂಕ: 19–03–2016

## ಅಧಿಸೂಚನೆ

**ವಿಷಯ:** ದಿನಾಂಕ: 01–01–2016ಕ್ಕೆ ಇದ್ದಂತೆ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರೇಡ್–2 ಶಿಕ್ಷಕರ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸುವ ಬಗ್ಗೆ.

**ಉಲ್ಲೇಖ:**
1) ಕಾರ್ಯದರ್ಶಿಗಳು, ಕ.ಪ್ರೌ.ಶಿ.ಪ.ಮಂ. ಹಾಗೂ ಪದನಿಮಿತ್ತ ಸಹನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಬೆಳಗಾವಿ ಇವರ ಪತ್ರ ಸಂಖ್ಯೆ ಇ2(1&3)/ಪ್ರೌಶಾಶಿ/ಜೇಷ್ಟತೆ/ವಿವ/08/2015–16 ದಿನಾಂಕ: 17–03–2016.
2) ನಿರ್ದೇಶಕರು(ಪ್ರೌಢ ಶಿಕ್ಷಣ), ಆಯುಕ್ತರ ಕಛೇರಿ, ಸಾ.ಶಿ.ಇ., ಬೆಂಗಳೂರು ಇವರ ಪತ್ರ ಸಂಖ್ಯೆ. ಸಿ4(2)/ಪ್ರೌಶಾಶಿಸಶಿಜೇ/10/2014–15, ದಿನಾಂಕ: 29–06–2015.
3) ಸರಕಾರದ ಪತ್ರ ಸಂಖ್ಯೆ. ಇಡಿ 152 ಎಲ್‌ಬಿಪಿ 2014, ದಿನಾಂಕ: 20–05–2014.
4) ಸರಕಾರದ ಸುತ್ತೋಲೆ ಸಂಖ್ಯೆ. ಇಡಿ 250 ಡಿಪಿಐ 2006, ದಿನಾಂಕ: 22–02–2008.
5) ಸರಕಾರದ ಅಧಿಸೂಚನೆ ಸಂಖ್ಯೆ ಡಿಪಿಎಆರ್ 12 ಎಸ್‌ಡಿಇ 2007, ದಿನಾಂಕ: 29–01–2008.
6) ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತಾ) ನಿಯಮಗಳು–1957 ನಿಯಮ–10ರಂತೆ.

ಸರ್ಕಾರಿ ಪ್ರೌಢ ಶಾಲಾ ಸಹ ಶಿಕ್ಷಕರು ಗ್ರೇಡ್–2 ಇವರ ಜೇಷ್ಠತಾ ಪಟ್ಟಿಯನ್ನು ತಯಾರಿಸುವಾಗ ಸೇವೆಗೆ ಸೇರಿದ ದಿನಾಂಕವನ್ನು ಪರಿಗಣಿಸದೇ ಆಯ್ಕೆ ಪಟ್ಟಿಯಲ್ಲಿರುವ ಮೆರಿಟ್ ಲಿಸ್ಟನಲ್ಲಿ ಇರುವ ಕ್ರಮ ಸಂಖ್ಯೆಯನ್ನು ಪರಿಗಣಿಸಿ ಸಿದ್ದಪಡಿಸುವಂತೆ ಉಲ್ಲೇಖ(3)ರ ಸರಕಾರದ ಪತ್ರದಲ್ಲಿ ತಿಳಿಸಲಾಗಿರುತ್ತದೆ. ಅದರಂತೆ ಉಲ್ಲೇಖ(2)ರಲ್ಲಿ ಸರ್ಕಾರಿ ಪ್ರೌಢ ಶಾಲಾ ಸಹ ಶಿಕ್ಷಕರು ಗ್ರೇಡ್–2 ಇವರ ಜೇಷ್ಠತಾ ಪಟ್ಟಿಯನ್ನು ತಯಾರಿಸುವಾಗ ಸೇವೆಗೆ ಸೇರಿದ ದಿನಾಂಕವನ್ನು ಪರಿಗಣಿಸದೇ ಆಯ್ಕೆ ಪಟ್ಟಿಯಲ್ಲಿರುವ ಮೆರಿಟ್ ಲಿಸ್ಟನಲ್ಲಿ ಇರುವ ಕ್ರಮ ಸಂಖ್ಯೆಯನ್ನು ಪರಿಗಣಿಸಿ ಸಿದ್ದಪಡಿಸುವಂತೆ ಆಯಾ ವಿಭಾಗದ ಕಾರ್ಯದರ್ಶಿಗಳು, ಕ.ಪ್ರೌ.ಶಿ.ಪ.ಮಂ. ಹಾಗೂ ಪದನಿಮಿತ್ತ ಸಹನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಬೆಳಗಾವಿ ಇವರಿಗೆ ಸೂಚಿಸಲಾಗಿರುತ್ತದೆ. ಅದರಂತೆ ಉಲ್ಲೇಖ(1)ರಲ್ಲಿ ಕಾರ್ಯದರ್ಶಿಗಳು, ಕ.ಪ್ರೌ.ಶಿ.ಪ.ಮಂ. ಹಾಗೂ ಪದನಿಮಿತ್ತ ಸಹನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಬೆಳಗಾವಿ ಇವರು ವಿಭಾಗದ ಎಲ್ಲಾ ಉಪನಿರ್ದೇಶಕರಿಂದ ಮಾಹಿತಿ ಪಡೆದು ಕ್ರೋಢಿಕರಿಸಿದ ತಾತ್ಕಾಲಿಕ ಪಟ್ಟಿಯನ್ನು ಈ ಕಚೇರಿಗೆ ಸಲ್ಲಿಸಿರುತ್ತಾರೆ. ಸದರ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ವಿಭಾಗದ ಎಲ್ಲ ಉಪನಿರ್ದೇಶಕರು/ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಇ–ಮೇಲ್ ಮೂಲಕ ಕಳುಹಿಸಲಾಗಿದೆ. ಈ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ವಿಭಾಗದ ಎಲ್ಲಾ ಉಪನಿರ್ದೇಶಕರುಗಳ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಗಳ ಸೂಚನಾ ಫಲಕದ ಮೇಲೆ ದಿನಾಂಕ:21–3–2016ರಂದು ತಪ್ಪದೇ ಏಕಕಾಲಕ್ಕೆ ಪ್ರಕಟಿಸುವುದು. ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯಲ್ಲಿ ಈ ಪಟ್ಟಿ ಪ್ರಕಟಿಸುವ ಬಗ್ಗೆ ಉಪನಿರ್ದೇಶಕರು ಗಮನಿಸಿ, ಪರಿಶೀಲಿಸಿ ಖಾತರಿಪಡಿಸಿಕೊಳ್ಳುವುದು. ಈ ಬಗ್ಗೆ ಸ್ಥಳೀಯ ದಿನ ಪತ್ರಿಕೆ ಹಾಗೂ ಸುದ್ದಿ ಮಾಧ್ಯಮಗಳಲ್ಲಿ ವ್ಯಾಪಕ ಪ್ರಚಾರ ನೀಡಲು ಸೂಚಿಸಿದೆ. ಈ ಕೆಳಗಿನ ಅಂಶಗಳನ್ನು ಗಮನಿಸಿ ಜೇಷ್ಠತಾ ಪಟ್ಟಿಯಲ್ಲಿ ಯಾವುದೇ ತಪ್ಪುಗಳು ಆಗದಂತೆ ನೋಡಿಕೊಳ್ಳುವುದು.

1. ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿರುವ ಶಿಕ್ಷಕರ ಜನ್ಮ ದಿನಾಂಕ, ಸೇವೆಗೆ ಸೇರಿದ ದಿನಾಂಕ, ನೇಮಕಾತಿ ವಿಧಾನ, ಗ್ರೇಡ್–2 ಸಹಶಿಕ್ಷಕರ ಹುದ್ದೆಗೆ ಹಾಜರಾದ ದಿನಾಂಕ, ಬಡ್ತಿ, ಜಾತಿ, ಮೆರಿಟ್ ಕುರಿತು ನಮೂನೆಯಲ್ಲಿಯ ಕಾಲಂ 01ರಿಂದ 19ರವರೆಗೆ ಯಾವುದೇ ತಪ್ಪುಗಳಿದ್ದಲ್ಲಿ ಅವುಗಳನ್ನು ಪರಿಶೀಲಿಸುವುದು. ತಿದ್ದುಪಡಿಗಳು ಏನಾದರೂ

ಇದ್ದಲ್ಲಿ ಅಂತಹ ಶಿಕ್ಷಕರ ವಿವರಗಳನ್ನು ಪ್ರತ್ಯೇಕವಾಗಿ ನಮೂನೆಯಲ್ಲಿರುವಂತೆ ಮಾಹಿತಿಯನ್ನು ಸಮರ್ಥಿಸುವ ದಾಖಲೆಗಳೊಂದಿಗೆ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸಲ್ಲಿಸುವುದು.

2. ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿ ಯಾವುದೇ ಶಿಕ್ಷಕರ ಹೆಸರು ಬಿಟ್ಟು ಹೋದಲ್ಲಿ ಸೂಕ್ತ ದಾಖಲಾತಿಗಳೊಂದಿಗೆ ನಿಗದಿತ ನಮೂನೆಯಲ್ಲಿ (ಕಾಲಂ 01ರಿಂದ 19) ಹೆಸರು ಸೇರ್ಪಡಿಸಲು ಮಾಹಿತಿಯನ್ನು ಸಮರ್ಥಿಸುವ ದಾಖಲೆಗಳೊಂದಿಗೆ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸಲ್ಲಿಸುವುದು.
3. ಅಂತರ ವಿಭಾಗ ವರ್ಗಾವಣೆ ಹೊಂದಿರುವ ಶಿಕ್ಷಕರು ಆಯಾ ವಿಭಾಗದಲ್ಲಿ ಆಯ್ಕೆ ಹೊಂದಿರುವ ಆಯ್ಕೆ ಪಟ್ಟಿಯಲ್ಲಿನ ಅರ್ಹತಾ ಅಂಕಗಳನ್ನು(ಕಾಲಂ ನಂ.18ರಲ್ಲಿನ ಮಾಹಿತಿ) ಕಡ್ಡಾಯವಾಗಿ ನಮೂದಿಸಿ ದಾಖಲೆ ಸಹಿತ ಆಕ್ಷೇಪಣೆ ಸಲ್ಲಿಸಲು ಸೂಚಿಸಿದೆ.
4. ತಾತ್ಕಾಲಿಕ ಜೇಷ್ಠತಾ ಪಟ್ಟಿಗೆ ಸಂಬಂಧಿಸಿದಂತೆ ಆಕ್ಷೇಪಣೆಗಳು ಇದ್ದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಗೆ ನಿಗದಿತ ವೇಳಾಪಟ್ಟಿಯಂತೆ ಆಕ್ಷೇಪಣಾ ಅರ್ಜಿಗಳನ್ನು ಸಲ್ಲಿಸುವುದು. ನಿಗದಿತ ಅವಧಿ ನಂತರ ಬಂದ ಆಕ್ಷೇಪಣಾ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸುವಂತಿಲ್ಲ. ನಿಗದಿ ಪಡಿಸಿದ ವೇಳಾ ಪಟ್ಟಿಯಲ್ಲಿಯ ದಿನಾಂಕಗಳಂದು ತಪ್ಪದೇ ಮಾಹಿತಿ ಒದಗಿಸಲು ತಿಳಿಸಿದೆ.
5. ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿರುವಂತೆ ಸರ್ಕಾರಿ ಪ್ರೌಢ ಶಾಲಾ ಸಹ ಶಿಕ್ಷಕರು ಗ್ರೇಡ್-2 ಮತ್ತು ತತ್ಸಮಾನ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರುಗಳ ವಿವರವನ್ನು (ಕಾಲಂ 01ರಿಂದ 19) ಪರಿಶೀಲಿಸಿ ತದನಂತರ ಜೇಷ್ಠತಾಪಟ್ಟಿಗೆ ಸಂಬಂಧಿಸಿದಂತೆ ಶಿಕ್ಷಕರು ಸಲ್ಲಿಸಿದ ಆಕ್ಷೇಪಣೆಗಳನ್ನು ನಿಯಮಾನುಸಾರ ಪರಿಶೀಲಿಸಿ ಜೇಷ್ಟತಾ ಪಟ್ಟಿಯಲ್ಲಿ ಸೇರ್ಪಡೆ ಮಾಡಲು ಸೂಕ್ತ ದಾಖಲೆಗಳೊಂದಿಗೆ ಪ್ರಸ್ತಾವನೆಯನ್ನು ಕಾರ್ಯದರ್ಶಿಗಳು, ಕ.ಪ್ರೌ.ಶಿ.ಪ.ಮಂ. ಹಾಗೂ ಪದನಿಮಿತ್ತ ಸಹನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಬೆಳಗಾವಿ ಇವರಿಗೆ ಸಲ್ಲಿಸುವುದು ಹಾಗೂ "update" ಮಾಡುವುದು.
6. ಈ ವಿಭಾಗದ ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿನ ಆಕ್ಷೇಪಣೆಗಳನ್ನು ಸರಿಪಡಿಸಿ ಪರಿಷ್ಕೃತ ಅಂತಿಮವಾಗಿ ಪ್ರಕಟಿಸಲಾಗುವುದು ಮತ್ತು ಅಂತಿಮವಾಗಿ ಪ್ರಕಟವಾದ ನಂತರ ಯಾವುದೇ ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ. ಆದ್ದರಿಂದ ಬಾಧಿತ ಶಿಕ್ಷಕರುಗಳಿಂದ ಸರಿಯಾದ ಸಂಪೂರ್ಣವಾದ ನಿಖರ ದಾಖಲೆ ಮಾಹಿತಿಯನ್ನು ಪಡೆದು ಕ್ರಮವಹಿಸಲು ಸಂಬಂಧಿಸಿದ ಪ್ರಾಧಿಕಾರಿಗಳಿಗೆ ತಿಳಿಸಿದೆ.
7. ಮೇಲ್ಕಂಡ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ನಿಖರವಾದ ಮಾಹಿತಿಯನ್ನು ಕಾರ್ಯದರ್ಶಿಗಳು, ಕ.ಪ್ರೌ.ಶಿ.ಪ.ಮಂ. ಹಾಗೂ ಪದನಿಮಿತ್ತ ಸಹನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಬೆಳಗಾವಿ ಇವರಿಗೆ ನಿಗದಿತ ಅವಧಿಯಲ್ಲಿ ಸಲ್ಲಿಸುವುದು. ಸಲ್ಲಿಸದೇ ಇದ್ದ ಪಕ್ಷದಲ್ಲಿ ಸಂಬಂಧಿಸಿದ ಉಪನಿರ್ದೇಶಕರನ್ನೇ ನೇರ ಹೊಣೆಗಾರರನ್ನಾಗಿ ಮಾಡಿ ಶಿಸ್ತುಕ್ರಮ ಜರುಗಿಸಲು ಕ್ರಮವಹಿಸಲಾಗುವುದು.

19/3

(ವೀರಣ್ಣ ಜಿ.ತುರಮರಿ),
ಅಪರ ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ,
ಧಾರವಾಡ.

ಗೆ,

1) ಕಾರ್ಯದರ್ಶಿಗಳು, ಕ.ಪ್ರೌ.ಶಿ.ಪ.ಮಂ. ಹಾಗೂ ಪದನಿಮಿತ್ತ ಸಹನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಬೆಳಗಾವಿ.

2)ವಿಭಾಗದ ಎಲ್ಲ ಉಪನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ.

## ನಿಗದಿತ ವೇಳಾಪಟ್ಟಿ.

| ಕ್ರ.ಸಂ | ಕ್ರಮ ಕೈಕೊಳ್ಳಬೇಕಾದ ವಿವರ | ದಿನಾಂಕ | ಷರಾ |
|---|---|---|---|
| 1 | ಸಂಬಂಧಿಸಿದ ಶಿಕ್ಷಕರು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಗೆ ಆಕ್ಷೇಪಣೆ ಸಲ್ಲಿಸುವ ದಿನಾಂಕ | 21–3–2014ರಿಂದ 12–04–2016 | |
| 2 | ಕ್ಷೇತ್ರ ಶಿಕ್ಷಣಾಧಿಕಾರಿಗಳು ತಮ್ಮ ಹಂತದಲ್ಲಿ ಸ್ವೀಕರಿಸಿದ ಆಕ್ಷೇಪಣಾ ಅರ್ಜಿಗಳನ್ನು ನಿಯಮಾನುಸಾ ಕ್ರೋಢಿಕರಿಸಿ ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರಿಗೆ ಸಲ್ಲಿಸುವುದು | 15–04–2016 | |
| 3 | ಜಿಲ್ಲಾ ಉಪನಿರ್ದೇಶಕರು ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಸ್ವೀಕರಿಸಿದ ಅರ್ಜಿಗಳನ್ನು ಕ್ರೋಢಿಕರಿಸಿ ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿ ಸೂಕ್ತ ತಿದ್ದುಪಡಿ ಮಾಡಿದ ಹಾರ್ಡ ಕಾಪಿಯೊಂದಿಗೆ ಮತ್ತು ಸ್ವೀಕರಿಸಿದ ಆಕ್ಷೇಪಣೆಗಳ ಅರ್ಜಿಗಳೊಂದಿಗೆ (ದಾಖಲೆ ಸಹಿತ) ಸಹನಿರ್ದೇಶಕರು. ಸಾ.ಶಿ.ಇ., ಬೆಳಗಾವಿ ಇವರಿಗೆ ಸಲ್ಲಿಸುವುದು. | 18–04–2016 | |
| 4 | ಸಹನಿರ್ದೇಶಕರು. ಸಾ.ಶಿ.ಇ., ಬೆಳಗಾವಿ ಇವರು ಉಪನಿರ್ದೇಶಕರುಗಳಿಂದ ಪಡೆದ ಆಕ್ಷೇಪಣೆಗಳನ್ನು ನಿಯಮಾನುಸಾರ ಪರಿಶೀಲಿಸಿ ಸರಿಪಡಿಸಿ ಪರಿಷ್ಕ್ರತ ಜೇಷ್ಟತಾ ಪಟ್ಟಿಯನ್ನು ಆಯುಕ್ತಾಲಯಕ್ಕೆ ಸಲ್ಲಿಸುವುದು. | 21–4–2015 | |
| 5 | ಧಾರವಾಡ ಆಯುಕ್ತಾಲಯಕ್ಕೆ ಸಲ್ಲಿಸುವುದು. | 30–4–2016 | |

(ವೀರಣ್ಣ ಜತ್ತಿ ಕುರಮರಿ), 19/3
ಅಪರ ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ,
ಧಾರವಾಡ.

| ಅಪರ ಆಯುಕ್ತರ ಕಾರ್ಯಾಲಯ, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ | | |
|---|---|---|
| ಪ್ರೌಢ ಶಾಲಾ ಸಹ ಶಿಕ್ಷಕರು-ಗ್ರೇಡ-2 ತಾತ್ಕಾಲಿಕ ಜೇಷ್ಠತಾ ಪಟ್ಟಿ ದಿನಾಂಕ: 01-01-2016ಕ್ಕೆ ಇದ್ದಂತೆ | | |
| ಬಾಧಿತ ಸಹ ಶಿಕ್ಷಕರು ಆಕ್ಷೇಪಣೆ ಸಲ್ಲಿಸಲು ನಮೂನೆ | | |
| 1 | Sl No | |
| 2 | Name & Address | |
| 3 | School Address | |
| 4 | Dist No | |
| 5 | Ranking No | |
| 6 | Batch Ranking | |
| 7 | GENDER | |
| 8 | Designation | |
| 9 | Qualification | |
| 10 | Subject | |
| 11 | Medium | |
| 12 | Date of Birth | |
| 13 | Entry to Service | |
| 14 | Mode of Appointment | |
| 15 | Promotion order dated | |
| 16 | Date of PROM to Grade-II post | |
| 17 | Caste | |
| 18 | Merit Score | |
| 19 | Date of entry into this division & From which division (ಬೇರೆ ವಿಭಾಗದಿಂದ ಬಂದವರು) | |
| 20 | REMARK | |
| | | |
| ಪ್ರಾಥಮಿಕ ಶಾಲೆಯಿಂದ ಪ್ರೌಢ ಶಾಲೆಗೆ ಬಡ್ತಿ ಹೊಂದಿದ ಶಿಕ್ಷಕರು ಮಾತ್ರ(ಹೆಚ್ಚುವರಿ ಮಾಹಿತಿ) | | |
| 1 | Date of entry into Service (primary) | |
| 2 | promotion order date | |
| 3 | Date of joining secondary Grade-II post | |

ಶಿಕ್ಷಕರ ಸಹಿ

ವಿಶೇಷ ಸೂಚನೆ: ತಾತ್ಕಾಲಿಕ ಪಟ್ಟಿಯಲ್ಲಿ ಇದ್ದಂತಹ ಸೇವಾ ವಿವರಗಳಲ್ಲಿ ವ್ಯತ್ಯಾಸ ಇದ್ದಂತಹ ಶಿಕ್ಷಕರು ಮಾತ್ರ ಆಕ್ಷೇಪಣೆಗಳನ್ನು ಈ ನಮೂನೆಯಲ್ಲಿ ಭರ್ತಿ ಮಾಡಿ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ನೀಡುವುದು ಹಾಗೂ ಸಂಬಂಧಿಸಿದ ದೃಢೀಕೃತ ದಾಖಲೆಗಳನ್ನು ಲಗತ್ತಿಸುವುದು.

19/3/2016.

(ವೀರಣ್ಣ. ಜಿ. ತುರಮರಿ)
ಅಪರ ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ,
ಧಾರವಾಡ